**ಸಾಕ್ಷಿಗೆ ದಿನಾಂಕ 27.11.2025 ರಂದು ಪ್ರಮಾಣ ವಚನ ನೀಡಲಾಯಿತು.**

**ಪಾಟೀಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ಓದಿ ತಿಳಿದುಕೊಂಡಿರುತ್ತೇನೆ. ನಿಪಿ-2 ಪತ್ರಕ್ಕೆ ನಾನು ಪ್ರಕಾಶ ಹಾಗೂ ನಾಗನಾಯಕರವರು ಸಹಿ ಮಾಡಿರುತ್ತೇವೆ. ಪತ್ರವನ್ನು ಯಾರು ಬರೆದಿರುತ್ತಾರೆ ನನಗೆ ನೆನಪಿಲ್ಲ. ಸರ್ವೆ ನಂಬರ 122, 4 ಎಕರೆ 38 ಗುಂಟೆ ಪೈಕಿ 1 ಎಕರೆಗೆ ಸಂಬಂಧಿಸಿದಂತೆ ಕ್ರಯದ ಕರಾರು ಪತ್ರ ಬರೆದಿರುತ್ತಾರೆ. ಸದರಿ ಜಮೀನು ದುರಸ್ತಾಗಿಲ್ಲ. ಕ್ರಯದ ಕರಾರು ಪತ್ರದಲ್ಲಿ ಜಮೀನು ಖರೀದಿ ಪತ್ರ ಬರೆದು ಕೊಡಲು ತಪ್ಪಿದ್ದಲ್ಲಿ ಜಮೀನು ವಾದಿಗೆ ಸೇರಬೇಕು ಎಂದು ಷರತ್ತು ವಿಧಿಸಲಾಗಿತ್ತು. ವಾದಿಯ ಗಂಡ ಪ್ರಕಾಶರವರ ಪರಿಚಯ ಇದೆ. ಪ್ರಕಾಶರವರು ಊರಿನಲ್ಲಿ ಲೇವಾದೇವಿ ವ್ಯವಹಾರ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿ ಲೇವಾದೇವಿ ವ್ಯವಹಾರ ಮಾಡುವುದಿಲ್ಲ ವ್ಯವಸಾಯ ಮಾಡುತ್ತಾರೆ. ವಾದಿ ಆರೋಗ್ಯವಂತರಾಗಿದ್ದಾರೆ ಎಂದರೆ ಸರಿ. ವಾದಿ ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನುಡಿಯಲು ಯಾವುದೇ ತೊಂದರೆ ಇಲ್ಲ.

ಸುಮಾರು 5-6 ವರ್ಷಗಳ ಹಿಂದೆ ವ್ಯವಹಾರ ನಡೆದಿರುತ್ತದೆ ನನಗೆ ದಿನಾಂಕ ತಿಂಗಳು ವರ್ಷ ಗೊತ್ತಿಲ್ಲ. ಕ್ರಯದ ಕರಾರು ಪತ್ರ ಬರೆಯುವ ಒಂದು ವಾರದ ಮುಂಚಿತವಾಗಿ ಕ್ರಯದ ಮಾತುಕತೆ ಪ್ರಕಾಶರವರ ಮನೆಯಲ್ಲಿ ಆಗಿತ್ತು, ಆ ಸಮಯದಲ್ಲಿ ನಾನು, 1 ನೇ ಪ್ರತಿವಾದಿ ನಾಗನಾಯಕರವರು ಇದ್ದೇವು. 5 ಲಕ್ಷ ಹಣಕ್ಕೆ ಮಾತುಕತೆಯಾಗಿತ್ತು ಆದರೆ 3 ಲಕ್ಷ ಹಣ ಮಾರಾಟ ಮಾಡಲು ಒಪ್ಪಿರುತ್ತಾರೆ. ಸದರಿ ದಿನ 2 ಲಕ್ಷ ಹಣ ವಾದಿ ಕೊಟ್ಟಿರುತ್ತಾರೆ. 500 ರೂ. ಮುಖಬೆಲೆಯ ನಾಲ್ಕು ಕಟ್ಟು ಗಳನ್ನು ವಾದಿ ಕೊಟ್ಟಿರುತ್ತಾರೆ. ಉಳಿದ 3 ಲಕ್ಷ ಹಣ ಕ್ರಯ ಪತ್ರ ಬರೆಯುವಾಗ ಕೊಡಬೇಕೆಂದು ಒಪ್ಪಿಗೆಯಾಗಿರುತ್ತದೆ. 5 ಲಕ್ಷಕ್ಕೆ ಮಾತುಕತೆಯಾಗಿ ಮುಂಚಿತವಾಗಿ 2 ಲಕ್ಷ ಕೊಟ್ಟಿರುತ್ತೇವೆ ಎಂದು ನಿಪಿ-2 ರಲ್ಲಿ ನಮೂದು ಮಾಡಿಲ್ಲ ನಮೂದು ಮಾಡಲು ತೊಂದರೆ ಇರಲಿಲ್ಲ. ಪ್ರಕಾಶರವರು ಪ್ರತಿವಾದಿಯವರಿಗೆ ಮುಂಗಡ 2 ಲಕ್ಷ ಹಣ ಕೊಟ್ಟಿರುತ್ತಾರೆ ವಾದಿ ಕೊಟ್ಟಿಲ್ಲ. 1 ನೇ ಪ್ರತಿವಾದಿ 2016 ರ ಮೇ ತಿಂಗಳ 3 ನೇ ವಾರದಲ್ಲಿ ಪ್ರಕಾಶರವರಿಗೆ 4,40,000/- ರೂ. ಬಡ್ಡಿ ಸಾಲ ಕೇಳಿದ್ದರು ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ

ದಿಃ28.05.2016 ರಂದು ಆನ್ ಡಿಮ್ಯಾಂಡ್ ಪ್ರೋನೋಟ್ ಹಾಗೂ ಹಣ ಸಂದಾಯ ರಶೀದಿ ಭದ್ರತೆಗಾಗಿ ಕೊಟ್ಟು 4,40,000/- ಹಣವನ್ನು ಪ್ರಕಾಶರವರಿಂದ ಪಡೆದುಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ದಿಃ08.02.2019 ರಲ್ಲಿ 1 ನೇ ಪ್ರತಿವಾದಿ ಬಡ್ಡಿಯನ್ನು ಪ್ರಕಾಶರವರಿಗೆ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿಃ08.02.2019 ರಂದು ಆನ್ ಡಿಮ್ಯಾಂಡ್ ಪ್ರೋನೋಟ್ ಹಾಗೂ ಹಣ ಸಂದಾಯ ರಶೀದಿ ಭದ್ರತೆಗಾಗಿ ಕೊಟ್ಟು 4,40,000/- ಹಣವನ್ನು ಪ್ರಕಾಶರವರಿಂದ ಪಡೆದುಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಹಣದ ಭದ್ರತೆಗಾಗಿ ಆಧಾರ ಪತ್ರ ಬರೆದುಕೊಡಬೇಕು ಎಂದು ಪ್ರಕಾಶರವರು 1 ನೇ ಪ್ರತಿವಾದಿಗೆ ಕೇಳಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮಾರ್ಚ ತಿಂಗಳ ಮೊದಲನೇ ವಾರ 2019 ರಂದು 1 ನೇ ಪ್ರತಿವಾದಿ ಪ್ರಕಾಶರವರಿಗೆ 1,40,000/- ರೂ. ಹಣ ಮರುಪಾವತಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಉಳಿದ 3 ಲಕ್ಷ ಹಣಕ್ಕೆ ಆಧಾರ ಪತ್ರ ಬರೆದುಕೊಡುವಂತೆ ವಾದಿ ಹಾಗೂ ಆಕೆಯ ಗಂಡ 1 ನೇ ಪ್ರತಿವಾದಿಯನ್ನು ಕರೆದುಕೊಂಡು ಹೋಗಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿಯವರು 4,40,000/- ರೂ. ಸಾಲದ ಹಣದ ಉಳಿಕೆ 3 ಲಕ್ಷ ಹಣಕ್ಕೆ ವಾದಿಗೆ ಆಧಾರ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಹೊರತು ದಾವಾ ಸ್ವತ್ತನ್ನು ಮಾರಾಟ ಮಾಡಲು ಒಪ್ಪಿ ನಿಪಿ-2 ರ ಪತ್ರನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ವಾದಿ ಹಾಗೂ ಪ್ರಕಾಶರವರು ಸೇರಿಕೊಂಡು ಕರಾರು ಪತ್ರವನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಪತ್ರ ಬರೆಯುವಾಗ 2,95,000/- ಮುಂಗಡ ಹಣ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-2 ರ ಒಕ್ಕಣೆಗಳನ್ನು ನಾನು ಓದಿಸಿ ತಿಳಿದುಕೊಂಡಿರುತ್ತೇನೆ. 1 ನೇ ಪ್ರತಿವಾದಿ 3 ಲಕ್ಷ ಮಾರುಕಟ್ಟೆ ಮೌಲ್ಯ ಇರುತ್ತದೆ ಎಂದು ಹೇಳಿ 5 ಲಕ್ಷದ ವ್ಯವಹಾರವನ್ನು 3 ಲಕ್ಷ ಎಂದು ಪತ್ರದಲ್ಲಿ ಬರೆಸಿರುತ್ತಾರೆ. 5 ಲಕ್ಷಕ್ಕೆ ಮಾತುಕತೆಯಾಗಿತ್ತು ಎಂದು ಯಾವುದೇ ಕಾಗದ ಪತ್ರ ಬರೆದಿಲ್ಲ.

2,95,000/- ಹಣವನ್ನು ನಗದು ರೂಪದಲ್ಲಿ ಕೊಟ್ಟಿರುತ್ತಾರೆ. ದಿಃ13.03.2019 ರಂದು ಪ್ರತಿವಾದಿಯವರು ನನ್ನ ಸಮಕ್ಷಮ ವಾದಿಯಿಂದ 2,95,000/- ಹಣ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಹಾಗೂ ಪ್ರಕಾಶರವರು ಆತ್ಮೀಯವಾಗಿದ್ದೇವೆ ಎಂದರೆ ಸರಿ ಸಾಕ್ಷಿ ನಾನು 1 ನೇ ಪ್ರತಿವಾದಿಯೊಂದಿಗೆ ಸಹ ಆತ್ಮೀಯವಾಗಿದ್ದೇವೆ ಎಂದು ನುಡಿಯುತ್ತಾರೆ. ನಾನು ವಾದಿ ಪ್ರಕಾಶ ಹಾಗೂ ಉಳಿದ ಸಾಕ್ಷಿದಾರರು ಸೇರಿಕೊಂಡು 3 ಲಕ್ಷ ಹಣಕ್ಕೆ ಬರೆದುಕೊಟ್ಟ ಆಧಾರ ಪತ್ರವನ್ನು

ಕ್ರಯದ ಕರಾರು ಪತ್ರವೆಂದು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿಯವರು ದಾವಾ ಸ್ವತ್ತನ್ನು ವಾದಿಗೆ ಮಾರಾಟ ಮಾಡಲು ಒಪ್ಪಿ ಕ್ರಯ ಪತ್ರ ಬರೆದು ಕೊಟ್ಟಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ವಾದಿಯಿಂದ 4,40,000/- ರೂ. ಬಡ್ಡಿ ಸಾಲ ಪಡೆದುಕೊಂಡಿರುವ ವಿಚಾರ ಗ್ರಾಮಸ್ಥರಿಗೆ ಹಾಗೂ ನನಗೆ ಗೊತ್ತು ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

**ಓ.ಹೇ.ಕೇ.ಸರಿ ಇದೆ.**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಹುಣಸೂರು.**